StudentBounty.com

Test Paper : III

Test Subject : **KANNADA**

Test Subject Code : **K-0213**

Test Booklet Serial No. : ______________________

OMR Sheet No. : ______________________

Roll No. | | | | | | | | |

(Figures as per admission card)

**Name & Signature of Invigilator/s**

Signature: ______________________ Signature: ______________________

Name : ______________________ Name : ______________________

**Paper : III**

**Subject : KANNADA**

Time : 2 Hours 30 Minutes Maximum Marks : 150

Number of Pages in this Booklet : **16** Number of Questions in this Booklet : **75**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ III ಪುಸ್ತಿಕೆಯೊಳಗೆ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಉತ್ತರ ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯ ಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**

**Instructions for the Candidates**

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the ovals in OMR Answer Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**



www.StudentBounty.com

StudentBounty.com



# ಕನ್ನಡ

## ಪೇಪರ್ – III

**ಗಮನಿಸಿ :** ಈ ಪತ್ರಿಕೆಯು **(75) ಎಪ್ಪತ್ತೈದು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು..

**ಏಕ ಆಯ್ಕೆಯ ಮಾದರಿ ಪ್ರಶ್ನೆಗಳು**

**1.** 'ಬೆರೆಸಿ ಬರೆ ಗದ್ಯಪದ್ಯವೆರಡುಂ ಕೃತಿ ಚಂಪುವೆಂಬ ಪೆಸರಂ ಪಡೆದುಂ' ಈ ಉಕ್ತಿ ಇರುವ ಕೃತಿ

(A) ಕವಿರಾಜ ಮಾರ್ಗ

(B) ಕಾವ್ಯಾವಲೋಕನ

(C) ಸಾಹಿತ್ಯ ದರ್ಪಣ

(D) ಉದಯಾದಿತ್ಯಾಲಂಕಾರ

**2.** 'ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ' – ಈ ಉಕ್ತಿ ಹೇಳಿದ ಕವಿ

(A) ನೀಲಾಂಬಿಕೆ (B) ಸಿದ್ಧರಾಮ

(C) ಚೆನ್ನಬಸವಣ್ಣ (D) ಅಕ್ಕಮಹಾದೇವಿ

**3.** 'ನಿಮ್ಮಕೆರುಹಿಂಗೆನ್ನಶಿರಸರಿಯೇ' – ಈ ಉಕ್ತಿ ಬಂದಿರುವಕೃತಿ

(A) ಪ್ರಭುಲಿಂಗ ಲೀಲೆ

(B) ಮಾದಾರ ಚೆನ್ನಯ್ಯನ ರಗಳೆ

(C) ಬಸವರಾಜದೇವರ ರಗಳೆ

(D) ವೀರೇಶ ಚರಿತೆ

**4.** 'ಚದುರ ಮೆಯ್ಮೆಯ ಸತ್ಯವಿತ್ವದ ಸಂದ ಪಂಪನ' ಈ ಉಕ್ತಿ ಇರುವ ಶಾಸನ

(A) ಬಾದಾಮಿ ಶಾಸನ

(B) ಶ್ರವಣಬೆಳಗೊಳ ಶಾಸನ

(C) ಗಂಗಾಧರಂ ಶಾಸನ

(D) ಹಲ್ಮಿಡಿ ಶಾಸನ

**5.** 'ದ ಸೆಕೆಂಡ್ ಸೆಕ್ಸ್' ಕೃತಿ ಮೊದಲಿಗೆ ಪ್ರಕಟವಾದದ್ದು ಈ ಭಾಷೆಯಲ್ಲಿ

(A) ಫ್ರೆಂಚ್

(B) ಇಂಗ್ಲೀಷ್

(C) ಜರ್ಮನ್

(D) ಸ್ಪ್ಯಾನಿಷ್

**6.** ಇದು ಬಸವರಾಜ ಕಟ್ಟೀಮನಿ ಅವರ ಕೃತಿ

(A) ಚೋಮನ ದುಡಿ

(B) ಸ್ವಾತಂತ್ರ್ಯದೆಡೆಗೆ

(C) ಮೃತ್ಯುಂಜಯ

(D) ಔದಾರ್ಯದ ಉರುಳಲ್ಲಿ

**7.** ಬಸವಣ್ಣನವರ ಷಟ್‌ಸ್ಥಲದ ವಚನಗಳು –ಈ ಕೃತಿಯನ್ನು ಸಂಪಾದಿಸಿದವರು

(A) ಫ.ಗು. ಹಳಕಟ್ಟಿ

(B) ಆರ್. ಸಿ. ಹಿರೇಮಠ

(C) ಶಿ.ಶಿ. ಬಸವನಾಳ

(D) ಎಲ್. ಬಸವರಾಜು

**8.** ಧ್ವನ್ಯಾಲೋಕದ ಕರ್ತೃ

(A) ಆನಂದ ವರ್ಧನ

(B) ದಂಡಿ

(C) ಅಭಿನವಗುಪ್ತ

(D) ಭಾಮಹ



www.StudentBounty.com

StudentBounty.com

9. ಸರ್ವನಾಮ ಪ್ರತ್ಯಯಗಳಿಲ್ಲದ ಭಾಷೆ

(A) ತುಳು

(B) ಕನ್ನಡ

(C) ಮಲೆಯಾಳಂ

(D) ತಮಿಳು

10. ಎಂ.ಬಿ. ಎಮಿನೋ ಅವರೊಡನೆ 'ಎಟಿಮಾಲಜಿಕಲ್ ಡಿಕ್ಷನರಿ' ಸಿದ್ಧಪಡಿಸಿದವರು

(A) ಟಿ. ಬರೋ

(B) ಕಮಿಲ್‌ಜ್ವಲೆಬೆಲ್

(C) ರಾಬರ್ಟ್ ಕಾಲ್ಡ್‌ವೆಲ್

(D) ಬ್ಲೂವರ್ ಫೀಲ್ಡ್

11. ಜಾನಪದದಲ್ಲಿ ರಾಚನಿಕ ಸಿದ್ಧಾಂತದ ಪ್ರತಿಪಾದಕ

(A) ಜ್ಯೂಲಿಯಸ್ ಕ್ರಾಹ್

(B) ವಿ.ಜಿ. ಪ್ರಾಪ್

(C) ಆರ್. ಎಸ್. ಬಾಗ್ಸ್

(D) ಸ್ಟಿಥ್ ಥಾಂಸನ್

12. 'ಕಾವ್ಯವೆಂದರೆ ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲ, ಅದು ವ್ಯಕ್ತಿತ್ವದಿಂದ ಪಾರಾಗುವಿಕೆ' ಎಂದವರು

(A) ಲಾಂಜಿನಸ್

(B) ಎಡ್ವರ್ಡ್ ಬುಲ್ಲೋ

(C) ಅರಿಸ್ಟಾಟಲ್

(D) ಟಿ. ಎಸ್. ಎಲಿಯೆಟ್

13. 'ಬಾಳಾಚಾರ್ಯ' ಈ ಪಾತ್ರವಿರುವ ಕಾದಂಬರಿ

(A) ಗ್ರಾಮಾಯಣ

(B) ಸಂಸ್ಕಾರ

(C) ಮರಳಿಮಣ್ಣಿಗೆ

(D) ವಂಶವೃಕ್ಷ

14. 'ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು' – ಕೃತಿಯ ಕರ್ತೃ

(A) ಬಿ.ಎಸ್. ಗದ್ದಗೀಮಠ

(B) ಡಿ.ಕೆ. ರಾಜೇಂದ್ರ

(C) ಜೀ.ಶಂ. ಪರಮಶಿವಯ್ಯ

(D) ಎಂ.ಎಸ್. ಸುಂಕಾಪುರ

15. 'ಚಂದ್ರಿ' ಪಾತ್ರ ಬರುವ ಕಾದಂಬರಿ

(A) ಗ್ರಾಮಾಯಣ

(B) ಸಂಸ್ಕಾರ

(C) ಮರಳಿಮಣ್ಣಿಗೆ

(D) ದಾಟು

16. 'ಮಲ್ಲಿಗೆ ದಂಡೆ' ಕೃತಿಯ ಸಂಪಾದಕರು

(A) ಕಾಪಸೆ ರೇವಪ್ಪ

(B) ಬಿ. ಎಸ್. ಗದ್ದಗೀಮಠ

(C) ಸಿಂಪಿ ಲಿಂಗಣ್ಣ

(D) ಎಂ.ಎಸ್. ಸುಂಕಾಪುರ


www.StudentBounty.com

StudentBounty.com

17. 'ಕಥೆಯಾದಳು ಹುಡುಗಿ' – ಕಥಾಸಂಕಲನದ ಕರ್ತೃ

(A) ಶ್ರೀಕೃಷ್ಣ ಆಲನಹಳ್ಳಿ

(B) ಯು.ಆರ್. ಅನಂತಮೂರ್ತಿ

(C) ಯಶವಂತ ಚಿತ್ತಾಲ

(D) ವೈದೇಹಿ

18. 'ಕಾಯಕವೇ ಕೈಲಾಸ' ಈ ಹೇಳಿಕೆಯ ಕರ್ತೃ

(A) ಬಸವಣ್ಣ

(B) ಆಯ್ದಕ್ಕಿ ಮಾರಯ್ಯ

(C) ಚೆನ್ನಬಸವಣ್ಣ

(D) ಅಂಬಿಗರ ಚೌಡಯ್ಯ

19. 'ಕೋಗಿಲೆ, ಚೆಲ್ವ ಕೋಗಿಲೆ, ಮುದ್ದು ಕೋಗಿಲೆ '–ಈ ತತ್ವಪದದ ಕವಿ

(A) ಕಡಕೋಳ ಮಡಿವಾಳಪ್ಪ

(B) ನಿಜಗುಣ ಶಿವಯೋಗಿ

(C) ಶಿಶುನಾಳ ಷರೀಫ

(D) ಕನಕದಾಸ

20. 'ಯಯಾತಿ' ಕಾದಂಬರಿಯ ಅನುವಾದಕರು

(A) ವಿ. ಎಂ. ಇನಾಂದರ್

(B) ಗಿರೀಶ್ ಕಾರ್ನಾಡ್

(C) ದೇಜಗೌ

(D) ಪ್ರಧಾನ ಗುರುದತ್ತ

21. ಸಿಗ್ಮಂಡ್ ಫ್ರಾಯ್ಡ್ ನು ಈ ನಾಟಕವನ್ನು ಈಡಿಪ[ಸ್] ಕಾಂಪ್ಲೆಕ್ಸ್‌ನೆಲೆಯಲ್ಲಿ ವಿಮರ್ಶಿಸಿದನು

(A) ಹ್ಯಾಮ್ಲೆಟ್

(B) ಪಾರಸೀಕರು

(C) ಜ್ಯೂಲಿಯಸ್ ಸೀಜರ್

(D) ರೋಮಿಯೊ ಜೂಲಿಯಟ್

22. ಕಾಮ – ರತಿ ; ಶ್ರವಣ – ವಿರಕ್ತಿ ; ಶಿವ – ಶಕ್ತಿ – ಈ ತ್ರಿಕೂಟ ದ್ವಂದ್ವವು ನಿರೂಪಿತಗೊಂಡಿರುವ ಕಾವ್ಯ

(A) ಮೋಹನತರಂಗಿಣಿ

(B) ಭರತೇಶ ವೈಭವ

(C) ಕಬ್ಬಿಗರ ಕಾವ

(D) ಶಿವತತ್ತ್ವ ಚಿಂತಾಮಣಿ

23. 'ಆಲೋಕ' ಇವರ ಕೃತಿ

(A) ಕೆ. ಕೆಂಪೇಗೌಡ

(B) ಎಚ್. ಎಸ್. ಬಿಳಿಗಿರಿ

(C) ಪುರಂದರದಾಸ

(D) ಕನಕದಾಸ

24. ಐ. ಎ. ರಿಚರ್ಡ್ಸ್ ಅವರ ಕೃತಿ

(A) ದಿ ಮೀನಿಂಗ್ ಆಫ್ ಮೀನಿಂಗ್

(B) ದಿ ಮಿರರ್ ಆ್ಯಂಡ್ ಲ್ಯಾಂಪ್

(C) ಶಾರ್ಟ್ ಹಿಸ್ಟರಿ ಆಫ್ ಕ್ರಿಟಿಸಿಸಂ

(D) ಲ್ಯಾಂಗ್ವೇಜ್


www.StudentBounty.com

StudentBounty.com



**25.** ಚಂದ್ರಶೇಖರ ಕಂಬಾರರು ಮೂಲತಃ ಈ ಜಿಲ್ಲೆಗೆ ಸೇರಿದವರು

(A) ಬೆಂಗಳೂರು

(B) ಧಾರವಾಡ

(C) ಬಿಜಾಪುರ

(D) ಬೆಳಗಾವಿ

**26.** ಇದು ಜಗಣದ ಲಕ್ಷಣ

(A) – U –

(B) U U –

(C) U – U

(D) – UU

**27.** ಇವು ಸಂಧ್ಯಕ್ಷರಕ್ಕೆ ಉದಾಹರಣೆಗಳು

(A) ಡಿ, ಔ

(B) ಅ, ಇ

(C) ಉ, ಎ

(D) ಊ, ಔ

**28.** 'ಅಂತರ್ಭೇದದೊಳಿಂತು ಭಿದ್ರಿನೆದಿರಾಗಾಂಗೇಯರಂ ಕೊಂದರಿಂ' – ಇಲ್ಲಿಯ ಗಣವಿನ್ಯಾಸ ಈ ಛಂದಸ್ಸಿನದು

(A) ಉತ್ಪಲಮಾಲೆ

(B) ಶಾರ್ದೂಲ ವಿಕ್ರೀಡಿತ

(C) ಸ್ರಗ್ಧರೆ

(D) ಚಂಪಕಮಾಲೆ

**29.** ಏಕೈಕ ಹಸ್ತಪ್ರತಿಯಿಂದ ಸಂಪಾದಿಸಲ್ಪಟ್ಟ ಕೃತಿ

(A) ಕುಮಾರವ್ಯಾಸ ಭಾರತ

(B) ಜೈಮಿನಿ ಭಾರತ

(C) ಪಂಪ ಭಾರತ

(D) ಕರ್ಣಾಟಕ ಕಾದಂಬರಿ

**30.** 'ಕಾವ್ಯಾಲಂಕಾರ' ಇವರ ಕೃತಿ

(A) ರುದ್ರಟ

(B) ಭಾಮಹ

(C) ಕುಂತಕ

(D) ವಿಶ್ವನಾಥ

**31.** ಇವುಗಳು ದೇಶೀಯ ವರ್ಣಗಳೆಂದು ಕೇಶಿರಾಜ ಗುರುತಿಸುತ್ತಾನೆ

(A) ಏ ಓ ಉ ಋ ೠ

(B) ಎ ಏ ಋ ೠ ಔ

(C) ಎ ಒ ೞ ಟ ಳ

(D) ಎ ಒ ಓ ೞ ಟ

**32.** 'ನನ್ನೊಳಗೆ ನಾ ತಿಳಕೊಂಡೆ, ನನಗೆ ಬೇಕಾದ ಗಂಡನ ಮಾಡಿಕೊಂಡೆ' ಎಂದವರು

(A) ಅಕ್ಕಮಹಾದೇವಿ

(B) ಶಿಶುನಾಳ ಶರೀಫ

(C) ಕಡಕೋಳ ಮಡಿವಾಳಪ್ಪ

(D) ನಾಗಲಿಂಗಮತಿ



www.StudentBounty.com

StudentBounty.com



33. ''ಎನ್ನ ನುಡಿ ಟಾತಡಾಥಣಂ'' ಎಂದು ಹೇಳಿದ ಕವಿ

(A) ರನ್ನ

(B) ಕುಮಾರವ್ಯಾಸ

(C) ಪೊನ್ನ

(D) ಪಂಪ

34. 'ಕೋಲು ಸಖಿ, ಕೋಲು ಮುಖಿ, ಕೋಲೇ ನಾದಲೀಲೆ' ಎಂಬ ಉಕ್ತಿಯನ್ನು ಹೇಳಿದವರು

(A) ಬೇಂದ್ರೆ

(B) ಕುವೆಂಪು

(C) ಕೋಲಾಟದ ಜನಪದ ಗಾಯಕ

(D) ಮಧುರಚೆನ್ನ

35. 'ನಿಷಿಧಿಗಲ್ಲಿಗೆ' ಸೇರುವ ಶಾಸನ

(A) ಆತಕೂರು ಶಾಸನ

(B) ಲಕ್ಕುಂಡಿ ಶಾಸನ

(C) ಮಲ್ಲಿಷೇಣನ ಶಾಸನ

(D) ಕುರಿಕ್ಯಾಲ ಶಾಸನ

36. ಮೂರು ಭಾಷೆಗಳನ್ನು ಉಳ್ಳ ಶಾಸನ

(A) ಹಲ್ಮಿಡಿ ಶಾಸನ

(B) ಕುರಿಕ್ಯಾಲ ಶಾಸನ

(C) ರವಿಕೀರ್ತಿ ಐಹೊಳೆ ಶಾಸನ

(D) ವಿಷ್ಣುವರ್ಧನನ ಬೇಲೂರು ಶಾಸನ

37. 'ಆಂಗ್ಲ ಕವಿತಾವಳಿ' ಕೃತಿಯನ್ನು ರಚಿಸಿದವರು

(A) ತೀ. ನಂ. ಶ್ರೀ

(B) ಬಿ. ಎಲ್. ರೈಸ್

(C) ಕಿಟೆಲ್

(D) ಹಟ್ಟಿಯಂಗಡಿ ನಾರಾಯಣರಾವ್

38. ಲಾವಣಿಗಳ ಸಂಗ್ರಹವನ್ನು ಮೊದಲಿಗೆ ಮಾಡಿದವರು

(A) ಫ್ಲೀಟ್

(B) ಗದ್ದಗೀಮಠ

(C) ಜೀ. ಶಂ. ಪರಮಶಿವಯ್ಯ

(D) ಸೋಮಶೇಖರ ಇಮ್ರಾಪುರ

**ಬಹು ಆಯ್ಕೆಯ ಮಾದರಿ ಪ್ರಶ್ನೆಗಳು**

39. ಇವು ಜೈನ ಕಾವ್ಯಗಳು

(I) ಧರ್ಮ ಪರೀಕ್ಷೆ

(II) ಕರ್ಣಾಟಕ ಕಾದಂಬರಿ

(III) ಮನ್ಮಥ ವಿಜಯ

(IV) ಕುಸುಮಾವಳಿ

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು II

(B) II ಮತ್ತು IV

(C) I ಮತ್ತು III

(D) IV ಮತ್ತು II



www.StudentBounty.com

StudentBounty.com



40. ಇವು ಸಾಂಗತ್ಯ ಕೃತಿಗಳು

(I) ಭರತೇಶ ವೈಭವ ಮತ್ತು ರೇಣುಕವಿಜಯ

(II) ಜೀವಂಧರಸಾಂಗತ್ಯ ಮತ್ತು ಸನತ್ಕುಮಾರ ಚರಿತೆ

(III) ಸಮ್ಯಕ್ತ್ವ ಕೌಮುದಿ ಮತ್ತು ಮೋಹನ ತರಂಗಿಣಿ

(IV) ರಾಮಚರಿತೆ ಮತ್ತು ಪುಣ್ಯಾಸ್ರವ

(A) I ಮತ್ತು II

(B) II ಮತ್ತು III

(C) II ಮತ್ತು IV

(D) I ಮತ್ತು IV

41. ''ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ,'' ''ಮುನಿಮತಮನೆ ಪೇೞ್ದನೆಸೆಯೆ ಪೊಸಗನ್ನಡದಿಂ'' – ಈ ಶೈಲಿಗಳ ಕರ್ತೃಗಳು ಇವರು

(I) ನಯಸೇನ

(II) ಪಂಪ

(III) ಆಂಡಯ್ಯ

(IV) ಚಂದ್ರರಾಜ

(A) II ಮತ್ತು III

(B) I ಮತ್ತು II

(C) II ಮತ್ತು IV

(D) I ಮತ್ತು IV

42. ಅರಿಯಬಾರದ ಘನವನರಿದವರು ಅರಿಯದಂತಿರ್ಪ[...] ತನು ನಿರ್ವಾಣ, ಮನ ಸಂಸಾರ ; ಮಾತು ಬ್ರಹ್ಮ, ನೀತಿ ಅಧಮ ; – ಈ ಉಕ್ತಿಗಳನ್ನು ಅನುಕ್ರಮವಾಶಿ ಹೇಳಿದವರು

(I) ಚನ್ನ ಬಸವಣ್ಣ

(II) ಅಲ್ಲಮ ಪ್ರಭು

(III) ಮಡಿವಾಳ ಮಾಚಯ್ಯ

(IV) ಅಕ್ಕಮಹಾದೇವಿ

(A) II ಮತ್ತು III

(B) I ಮತ್ತು II

(C) I ಮತ್ತು IV

(D) II ಮತ್ತು IV

43. ಇವು ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಕೃತಿಗಳು

(I) ಕರ್ಣಾಟಕ ಭಾರತ ಕಥಾಮಂಜರಿ ಮತ್ತು ಜೀವಂಧರ ಚರಿತೆ

(II) ತೊರವೆ ರಾಮಾಯಣ ಮತ್ತು ಸದ್ಗುರು ರಹಸ್ಯ

(III) ಶಿವತತ್ವ ಚಿಂತಾಮಣಿ ಮತ್ತು ಪ್ರಭುಲಿಂಗಲೀಲೆ

(IV) ಮೈರಾವಣ ಕಾಳಗ ಮತ್ತು ವಿವೇಕ ಚಿಂತಾಮಣಿ

(A) II ಮತ್ತು IV

(B) II ಮತ್ತು III

(C) I ಮತ್ತು II

(D) I ಮತ್ತು IV



www.StudentBounty.com

StudentBounty.com

**44.** ಇವು ಪ್ರಗತಿಶೀಲ ಕಾದಂಬರಿಗಳು

(I) ಚಿರಸ್ಮರಣೆ ಹಾಗೂ ಜನಿವಾರ ಮತ್ತು ಶಿವದಾರ

(II) ವೈಶಾಖ ಮತ್ತು ಅವಸ್ಥೆ

(III) ಮೃತ್ಯುಂಜಯ ಮತ್ತು ಮರಳಿಮಣ್ಣಿಗೆ

(IV) ನಟಸಾರ್ವಭೌಮ ಮತ್ತು ಮಸಣದ ಹೂ

(A) III ಮತ್ತು IV (B) I ಮತ್ತು IV

(C) I ಮತ್ತು III (D) II ಮತ್ತು IV

**45.** ಇವು ಅನಂತಮೂರ್ತಿಯವರ ಕಾದಂಬರಿಗಳು

(I) ಭಾರತೀಪುರ ಮತ್ತು ಭವ

(II) ಅವಸ್ಥೆ ಮತ್ತು ಗತಿಸ್ಥಿತಿ

(III) ಮೂರುದಾರಿಗಳು ಮತ್ತು ಭೇದ

(IV) ಅವಸ್ಥೆ ಮತ್ತು ಭವ

(A) I ಮತ್ತು II (B) III ಮತ್ತು IV

(C) II ಮತ್ತು III (D) I ಮತ್ತು IV

**46.** ಇವು ಹೊಸಗನ್ನಡ ಛಂದಸ್ಸುಗಳು

(I) ಮಹಾಛಂದಸ್ಸು ಮತ್ತು ಕಂದ

(II) ತ್ರಿಪದಿ ಮತ್ತು ಮುಡಿ

(III) ಮುಡಿ ಮತ್ತು ಅಷ್ಟ ಷಟ್ಪದಿ

(IV) ಪದ್ಯಗಣ ಮತ್ತು ಸರಳರಗಳೆ

(A) III ಮತ್ತು IV

(B) I ಮತ್ತು III

(C) II ಮತ್ತು III

(D) II ಮತ್ತು IV

**47.** ಇವರು ನವ್ಯ ವಿಮರ್ಶಕರು

(I) ಗಿರಡ್ಡಿ ಗೋವಿಂದರಾಜ, ಎಂ. ಜಿ. ಕೃಷ್ಣಮೂರ್ತಿ

(II) ಕುರ್ತಕೋಟಿ, ಜಿ. ಎಸ್. ಆಮೂರ್

(III) ಜಿ. ಎಚ್. ನಾಯಕ, ಗಿರಡ್ಡಿ ಗೋವಿಂದರಾಜ

(IV) ಡಿ. ಆರ್. ನಾಗರಾಜ್, ಎಲ್. ಎಸ್. ಶೇಷಗಿರಿರಾವ್

ಸರಿಯಾದ ಉತ್ತರ

(A) II ಮತ್ತು III (B) I ಮತ್ತು II

(C) I ಮತ್ತು III (D) II ಮತ್ತು IV

**48.** ಇವು ದೇಶೀ ಶಬ್ದಗಳು

(I) ಹೊಸ್ತಿಲು (II) ಬೆತ್ತ

(III) ಕುಪ್ಪಸ (IV) ಅಕ್ಕಚ್ಚು

ಇವುಗಳಲ್ಲಿ ಸರಿಯಾದ ಉತ್ತರ

(A) II ಮತ್ತು IV (B) I ಮತ್ತು IV

(C) I ಮತ್ತು III (D) II ಮತ್ತು III

**49.** ಇವು ಶಬ್ದಾಲಂಕಾರಗಳು

(I) ಯಮಕ (II) ಉತ್ಪ್ರೇಕ್ಷೆ

(III) ಅನುಪ್ರಾಸ (IV) ದೀಪಕ

ಸರಿಯಾದ ಉತ್ತರ

(A) I ಮತ್ತು II (B) II ಮತ್ತು IV

(C) III ಮತ್ತು IV (D) I ಮತ್ತು III

**50.** ಇವರು ಭಾಷಾ ವಿಜ್ಞಾನಿಗಳು

(I) ಕಾಲ್ಡ್‌ವೆಲ್ (II) ಆರ್. ಎಸ್. ಬಾಗ್ಸ್

(III) ಟಿ. ಬರೋ (IV) ಲೂಕಾಸ್

(A) I ಮತ್ತು III (B) II ಮತ್ತು III

(C) I ಮತ್ತು IV (D) III ಮತ್ತು IV



www.StudentBounty.com

StudentBounty.com

51. 'ದ್ರಾವಿಡಿಯನ್ ಎಟಿಮಲಾಜಿಕಲ್ ಡಿಕ್ಶನರಿ' ಯನ್ನು ಸಿದ್ಧಗೊಳಿಸಿದವರು

(I) ಎಂ. ಬಿ. ಎಮಿನೊ

(II) ಕಮಿಲ್ ಜ್ವಲೆಬೆಲ್

(III) ಟಿ. ಬರೊ

(IV) ರಾಬರ್ಡ್ ಕಾಲ್ಡ್‌ವೆಲ್

ಸರಿಯಾದ ಉತ್ತರ

(A) I ಮತ್ತು IV (B) II ಮತ್ತು III

(C) I ಮತ್ತು III (D) III ಮತ್ತು IV

52. ಧರ್ಮವನ್ನು ವಸ್ತುವಾಗುಳ್ಳ ಶಾಸನಗಳು

(I) ಬುಕ್ಕನ ಶ್ರವಣಬೆಳಗೊಳದ ಶಾಸನ

(II) ಜಿನವಲ್ಲನ ಗಂಗಾಧರಂಶಾಸನ

(III) ದೇಕಬ್ಬೆಯ ಶಾಸನ

(IV) ಆತಕೂರು ಶಾಸನ

(A) I ಮತ್ತು III (B) I ಮತ್ತು II

(C) II ಮತ್ತು IV (D) III ಮತ್ತು IV

53. ಇವುಗಳನ್ನು 'ಕರ್ಣಾಟಕ ವಿಷಯ ಜಾತಿ' ಗಳೆನ್ನುತ್ತಾರೆ

(I) ಕಂದ

(II) ತ್ರಿಪದಿ

(III) ಷಟ್ಪದಿ

(IV) ರಗಳೆ

ಸರಿಯಾದ ಉತ್ತರ

(A) I ಮತ್ತು II (B) II ಮತ್ತು IV

(C) III ಮತ್ತು IV (D) II ಮತ್ತು III

54. ವಿವರಣೆ ಆಧಾರಿತ ಬಹುಆಯ್ಕೆಯ ಮಾದರಿ

**ಹೇಳಿಕೆ** : ಅಕ್ಕಿಗೊಟ್ಟು ಮಡಗೂಳ್ ಉಣ್ಬಂದವಂ ಪೋಲದೆ

**ವಿವರಣೆ** : ಅಕ್ಕಿ ಕೊಟ್ಟುಮಡಿಯ ಕೂಳು ಉಂಡಂತಾಗಿದೆ

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

55. **ಹೇಳಿಕೆ** : ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯಮಾಡಿ

**ವಿವರಣೆ** : ಸಗಣಿಯ ಹುಳು ಪ್ರೀತಿಯಿಂದ ಮನೆಯನ್ನು ಕಟ್ಟಿ

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ತಪ್ಪು

56. **ಹೇಳಿಕೆ** : ಉತ್ತರ ದ್ರುವದಿಂ ದಕ್ಷಿಣ ದ್ರುವಕು ಚುಂಬಕ ಗಾಳಿಯು ಬೀಸುತಿದೆ

**ವಿವರಣೆ** : ಉತ್ತರ ಧ್ರುವದಿಂದ ದಕ್ಷಿಣ ಧ್ರುವಕ್ಕೆ ರಭಸದ ಗಾಳಿಯು ಬೀಸುತ್ತಿದೆ

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ಸರಿ



www.StudentBounty.com

StudentBounty.com

57. ಹೇಳಿಕೆ : 'ಆಕೃತಿಮಾ' ಎಂಬುದು ಅರ್ಥವಿಲ್ಲದ ಕನಿಷ್ಠತಮ ಭಾಷಿಕ ಘಟಕ

ವಿವರಣೆ : ಆಕೃತಿ ಎನ್ನುವುದು ಅರ್ಥವಿಲ್ಲದ ಕೀಳಾದ ಭಾಷೆಯ ಘಟಕ

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

58. ಹೇಳಿಕೆ : 'ಜೀವನ ವಿಕಾಸವಿಲ್ಲದೆ, ಸಾಹಿತ್ಯದ ಉದಯವೂ ಇಲ್ಲ, ವಿಕಾಸವೂ ಇಲ್ಲ'

ವಿವರಣೆ : ಜೀವನವು ಉತ್ಕರ್ಷವಾಗದೆ, ಸಾಹಿತ್ಯವು ಜನ್ಮ ತಳೆಯುವುದೂ ಇಲ್ಲ, ಬೆಳೆಯುವುದೂ ಇಲ್ಲ

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

59. ಹೇಳಿಕೆ : 'ಬಿಲ್ಲಾಗಿರಬೇಕು ಬಲ್ಲವರೊಳು, ಕಲ್ಲಾಗಿರಬೇಕು ಕಠಿಣ ಭವತೊರೆಯೊಳು'

ವಿವರಣೆ : ಅರಿತವರ ಸಂಗಡ ಬಿಲ್ಲಿನಂತೆ ಕಾದಾಡಲು ಸಿದ್ಧವಾಗಿರಬೇಕು, ಕಷ್ಟವಾದ ಸಂಸಾರದಲ್ಲಿ ಕಲ್ಲಿನಂತೆ ಇರಬೇಕು

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

60. ಹೇಳಿಕೆ : ರಾಮರಾಜ್ಯ ಬಂದರೂ ರಾಗಿ ಬೀಸೋ[ದು] ತಪ್ಪೀತೇ !

ವಿವರಣೆ : ರಾಮನು ಬಂದು ರಾಜ್ಯವಾಳಿದರೂ ರಾಗಿಯನ್ನು ಬೀಸಕಲ್ಲಿನಲ್ಲೇ ಬೀಸಬೇಕು

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

61. ಬಹು ಆಯ್ಕೆಯ ಜೋಡಣೆಯ ಮಾದರಿ

| | |
|---|---|
| (a) ಹಾವು ತಿಂದವರ ನುಡಿಸಬಹುದು | (I) ಅಕ್ಕಮಹಾದೇವಿ |
| (b) ಅರಿಸಿನವಸಿ ಮಿಂದು ಹೊಂದುಡಿಗೆಯನೆ ತೊಟ್ಟು | (II) ಪುರಂದರ |
| (c) ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು | (III) ಬಸವಣ್ಣ |
| (d) ಹುಟ್ಟದ ಯೋನಿಗಳಿಲ್ಲ, ಮೆಟ್ಟದ ಭೂಮಿಗಳಿಲ್ಲ | (IV) ಸೂಳೆಸಂಕವ್ವ |
| | (V) ಕನಕದಾಸ |

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (III) | (IV) | (V) | (II) |
| (B) | (IV) | (II) | (I) | (III) |
| (C) | (III) | (I) | (V) | (II) |
| (D) | (III) | (I) | (II) | (V) |



www.StudentBounty.com

StudentBounty.com



62. (a) ಮುರುಕುತೊಲೆಯು ಹುಳುಕುಜಂತಿ ಕೊರೆದು ಸರಿದು ಕೀಲ ಸಡಲಿ — (I) ಕಡಕೋಳ ಮಡಿವಾಳಪ್ಪ

(b) ಮುಡಚಟ್ಟಿನೊಳು ಬಂದು ಮುಟ್ಟಿತಟ್ಟಿ ಎನುತೀರಿ ಮುಡಚೆಟ್ಟು ಎಲ್ಲಾದ್ದೇಳಣ್ಣ — (II) ಶಿಶುನಾಳ ಶರೀಫ

(c) ಹುಟ್ಟಲಾರದ ಭೂಮಿ ಮ್ಯಾಲೆ ನೆಟ್ಟನೊಂದು ಮರವು ಹುಟ್ಟಿ — (III) ಸರ್ವಜ್ಞ

(d) ಕರದಿ ಕಪ್ಪರವುಂಟು, ಹಿಡಿದೊಂದು ನಾಡುಂಟು, ಹರನೆಂಬ ದೈವ ನನಗುಂಟು — (IV) ಕೂಡಲೂರು ಬಸವಲಿಂಗ

(V) ನಿಜಗುಣಶಿವಯೋಗಿ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (II) | (I) | (IV) | (III) |
| (B) | (II) | (III) | (IV) | (V) |
| (C) | (II) | (I) | (IV) | (V) |
| (D) | (I) | (II) | (III) | (IV) |

63. (a) ಕನ್ನಡವಕ್ಕಿ — (I) ಅಂಶಿ ಸಮಾಸ

(b) ಇಬ್ಭಾಗ — (II) ತತ್ಪುರುಷ ಸಮಾಸ

(c) ಬೆಂಬಿಸಿಲು — (III) ದ್ವಿಗು ಸಮಾಸ

(d) ಮುಖದಾವರೆ — (IV) ಕ್ರಿಯಾ ಸಮಾಸ

(V) ಅರಿ ಸಮಾಸ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (II) | (I) | (III) | (V) |
| (B) | (I) | (II) | (V) | (IV) |
| (C) | (II) | (III) | (I) | (V) |
| (D) | (I) | (II) | (III) | (IV) |

64. (a) ನ, ಜ, ಭ, ಜ, ಜ, ರ — (I) ಮಹಾಸ್ರಗ್ಧರೆ

(b) ಸ, ಭ, ರ, ನ, ಮ, ಯ, ಲಘು ಮತ್ತು ಗುರು — (II) ಸ್ರಗ್ಧರೆ

(c) ಮ, ಸ, ಜ, ಸ, ತ, ತ, ಮತ್ತು ಗುರು — (III) ಚಂಪಕಮಾಲೆ

(d) ಮ, ರ, ಭ, ನ, ಯ, ಯ, ಯ — (IV) ಮತ್ತೇಭವಿಕ್ರೀಡಿತ

(V) ಶಾರ್ದೂಲ ವಿಕ್ರೀಡಿತ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (IV) | (II) | (III) | (I) |
| (B) | (III) | (IV) | (V) | (II) |
| (C) | (III) | (IV) | (II) | (V) |
| (D) | (IV) | (II) | (I) | (III) |



www.StudentBounty.com

StudentBounty.com



65\. (a) ನ ಕಾಂತಮಪಿ ನಿರ್ಭೂಷಂ ವಿಭಾತಿ ವನಿತಾಮುಖಮ್ (I) ಭಾಮಹ

(b) ಕಾವ್ಯಂ ಶೋಭಾಕರಾನ್ ಧರ್ಮಾನ್ ಅಲಂಕಾರಾನ್ ಪ್ರಚಕ್ಷತೇ (II) ದಂಡಿ

(c) ಪ್ರಜ್ಞಾನವನವೋಲ್ಲೇಖ ಶಾಲಿನೀ ಪ್ರತಿಭಾಮತಾ (III) ಭಟ್ಟತೌತ

(d) ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ (IV) ಆನಂದವರ್ಧನ

(V) ಭರತ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (II) | (III) | (IV) | (I) |
| (B) | (V) | (I) | (III) | (II) |
| (C) | (V) | (II) | (III) | (I) |
| (D) | (I) | (II) | (III) | (IV) |

66\. (a) ಬಾಳುರಿ (I) ವಿ. ಎಂ. ಇನಾಂದಾರ್

(b) ಇಜ್ಜೋಡು (II) ರಾವ್ ಬಹದೂರ್

(c) ವಿಜಯಯಾತ್ರೆ (III) ರಂ.ಶ್ರೀ. ಮುಗಳಿ

(d) ನಿಸರ್ಗ (IV) ವಿ.ಕೃ. ಗೋಕಾಕ್

(V) ಮಿರ್ಜಿ ಅಣ್ಣಾರಾಯ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (III) | (IV) | (I) | (V) |
| (B) | (I) | (IV) | (II) | (V) |
| (C) | (III) | (I) | (II) | (IV) |
| (D) | (II) | (I) | (V) | (III) |

67\. (a) ತಿರುಕೊಳವಿನಾಚಿ ಪ್ರಸಂಗ (I) ಆದಿಪುರಾಣ

(b) ನೀಲಾಂಜನೆಯ ನೃತ್ಯ ಪ್ರಸಂಗ (II) ಹರಿಶ್ಚಂದ್ರ ಕಾವ್ಯ

(c) ಚಂದ್ರಮತಿ ಪ್ರಲಾಪ (III) ರಾಜಶೇಖರ ವಿಳಾಸ

(d) ಸೀತಾಪಹರಣ ಪ್ರಸಂಗ (IV) ಪಂಪ ಭಾರತ

(V) ಪಂಪರಾಮಾಯಣ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (V) | (III) | (IV) | (II) |
| (B) | (III) | (I) | (II) | (IV) |
| (C) | (III) | (I) | (II) | (V) |
| (D) | (I) | (III) | (II) | (V) |



www.StudentBounty.com

StudentBounty.com



68. (a) ನನ್ನ ಕೈ ಹಿಡಿದಾಕೆ ಅಳುನುಂಗಿ ನಗು ಒಮ್ಮೆ — (I) ಜಿ.ಎಸ್. ಎಸ್.

(b) ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೊ — (II) ಪು.ತಿ.ನ.

(c) ಮೇಲೊಂದು ಗರುಡ ಹಾರುತಿಹುದು, ಕೆಳಗದರ ನೆರಳು ಓಡುತಿಹುದು — (III) ಅಡಿಗ

(d) ನೆಲತಾಯ ಮಾಯಕದ ಅರಗಿನರಮನೆಯಲ್ಲಿ ಹಸ್ತಿನಾಪುರದ ಸ್ಮೃತಿ ಹೊತ್ತಲ್ಲಿ — (IV) ಬೇಂದ್ರೆ

(V) ಕುವೆಂಪು

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (I) | (II) | (III) | (IV) |
| (B) | (IV) | (V) | (II) | (III) |
| (C) | (IV) | (III) | (II) | (I) |
| (D) | (II) | (V) | (I) | (III) |

69. (a) ರಂಗೋಲಿ — (I) ಕೆ.ಎಸ್. ನರಸಿಂಹಸ್ವಾ

(b) ಗಂಗಾಮಾಯಿ — (II) ಕೆ.ಎಸ್. ನಿಸಾರ್ ಅಹಮ್ಮದ್

(c) ಗಡಿಯಾರದಂಗಡಿಯ ಮುಂದೆ — (III) ಚಂದ್ರಶೇಖರ ಕಂಬಾರ

(d) ಕುರುಡು ಕಾಂಚಾಣ — (IV) ಕುವೆಂಪು

(V) ಬೇಂದ್ರೆ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (I) | (II) | (III) | (IV) |
| (B) | (II) | (I) | (III) | (IV) |
| (C) | (I) | (III) | (II) | (V) |
| (D) | (II) | (III) | (I) | (V) |

70. (a) ಅರಿಕೇಸರಿ — (I) ಹೊಯ್ಸಳ

(b) 3ನೇ ಕೃಷ್ಣ — (II) ಗಂಗರು

(c) 1ನೇ ಬಲ್ಲಾಳ — (III) ವಿಜಯನಗರ

(d) ಪ್ರೌಢದೇವರಾಯ — (IV) ಚಾಲುಕ್ಯ

(V) ರಾಷ್ಟ್ರಕೂಟ

ಇವುಗಳಿಗೆ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (IV) | (V) | (I) | (III) |
| (B) | (I) | (III) | (IV) | (V) |
| (C) | (IV) | (II) | (I) | (III) |
| (D) | (III) | (IV) | (I) | (V) |



www.StudentBounty.com

StudentBounty.com

**ಅನುಕ್ರಮ ಮಾದರಿ**

ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

**71.** (A) ಚಕ್ರೇಶ್ವರ ಚರಿತ, ಜಿನಾಕ್ಷರಮಾಲೆ, ಭಾಷಾಭೂಷಣ, ಮದನತಿಲಕ

(B) ಜಿನಾಕ್ಷರಮಾಲೆ, ಚಕ್ರೇಶ್ವರ ಚರಿತ, ಮದನತಿಲಕ, ಭಾಷಾಭೂಷಣ

(C) ಚಕ್ರೇಶ್ವರ ಚರಿತ, ಭಾಷಾಭೂಷಣ, ಜಿನಾಕ್ಷರ ಮಾಲೆ, ಮದನತಿಲಕ

(D) ಭಾಷಾಭೂಷಣ, ಜಿನಾಕ್ಷರಮಾಲೆ, ಚಕ್ರೇಶ್ವರಚರಿತ, ಮದನತಿಲಕ

**72.** (A) ನಿಜಗುಣಶಿವಯೋಗಿ, ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ

(B) ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ನಿಜಗುಣಶಿವಯೋಗಿ, ಕೂಡಲೂರು ಬಸವಲಿಂಗ

(C) ನಿಜಗುಣಶಿವಯೋಗಿ, ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ, ಶಿಶುನಾಳ ಶರೀಫ

(D) ಕಡಕೋಳ ಮಡಿವಾಳಪ್ಪ, ನಿಜಗುಣಶಿವಯೋಗಿ, ಕೂಡಲೂರು ಬಸವಲಿಂಗ, ಶಿಶುನಾಳ ಶರೀಫ

**73.** (A) ಕದಂಬರು, ಹೊಯ್ಸಳರು, ರಾಷ್ಟ್ರಕೂಟರು, ಚಾಲುಕ್ಯರು, ವಿಜಯನಗರ ಅರಸರು

(B) ಕದಂಬರು, ರಾಷ್ಟ್ರಕೂಟರು, ವಿಜಯನಗರ ಅರಸರು, ಚಾಲುಕ್ಯರು, ಹೊಯ್ಸಳರು

(C) ಕದಂಬರು, ಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು, ರಾಷ್ಟ್ರಕೂಟರು

(D) ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು

**74.** (A) ಕುವರಲಕ್ಷ್ಮಣ ಶಾಸನ, ಜಿನವಲ್ಲಭನ ಶಾಸನ, ದೇಕಬ್ಬೆಯ ಶಾಸನ, ಬುಕ್ಕನ ಶಾಸನ

(B) ಜಿನವಲ್ಲಭನ ಶಾಸನ, ದೇಕಬ್ಬೆಯ ಶಾಸನ, ಕುವರಲಕ್ಷ್ಮಣ ಶಾಸನ, ಬುಕ್ಕನ ಶಾಸನ

(C) ದೇಕಬ್ಬೆಯ ಶಾಸನ, ಕುವರಲಕ್ಷ್ಮಣ ಶಾಸನ, ಜಿನವಲ್ಲಭನ ಶಾಸನ, ಬುಕ್ಕನ ಶಾಸನ

(D) ಕುವರಲಕ್ಷ್ಮಣ ಶಾಸನ, ಜಿನವಲ್ಲಭನ ಶಾಸನ, ಬುಕ್ಕನ ಶಾಸನ, ದೇಕಬ್ಬೆಯ ಶಾಸನ

**75.** (A) ಪುನರ್ವಿವಾಹ, ನಾಲ್ಕುಮೊಳ ಭೂಮಿ, ಆ ಮುಖಾ ಈ ಮುಖ, ಗ್ರಸ್ಥರು

(B) ನಾಲ್ಕುಮೊಳ ಭೂಮಿ, ಪುನರ್ವಿವಾಹ, ಗ್ರಸ್ಥರು, ಆ ಮುಖಾ ಈ ಮುಖ

(C) ಪುನರ್ವಿವಾಹ, ಆ ಮುಖಾ ಈ ಮುಖ, ಗ್ರಸ್ಥರು, ನಾಲ್ಕುಮೊಳ ಭೂಮಿ

(D) ಗ್ರಸ್ಥರು, ಪುನರ್ವಿವಾಹ, ಆ ಮುಖಾ ಈ ಮುಖ, ನಾಲ್ಕುಮೊಳ ಭೂಮಿ


www.StudentBounty.com

StudentBounty.com



ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**



www.StudentBounty.com

StudentBounty.com

Total Number of Pag

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work



www.StudentBounty.com